# EU ಗೋಪ್ಯತೆ ನೀತಿ

ಈ ಗೋಪ್ಯತೆ ನೀತಿಯು ಐರೋಪ್ಯ ಒಕ್ಕೂಟ ("EU") ಹಾಗೂ ಐರೋಪ್ಯ ಆರ್ಥಿಕ ಪ್ರದೇಶದ Aviagen Group (“Aviagen”) ನ ಕಂಪನಿಗಳಿಗೆ ಹಾಗೂ ಚಟುವಟಿಕೆಗಳಿಗೆ ಅನ್ವಯಿಸುತ್ತದೆ, ಮತ್ತು Aviagen ಹೇಗೆ ನಿಮ್ಮ ವೈಯಕ್ತಿಕ ದತ್ತಾಂಶವನ್ನು ಸಂಗ್ರಹಿಸುತ್ತದೆ ಮತ್ತು ಪ್ರಕ್ರಿಯೆಗೊಳಿಸುತ್ತದೆ ಎನ್ನುವುದನ್ನು ವಿವರಿಸುತ್ತದೆ. ಈ ನೀತಿಯನ್ನು ಒಪ್ಪಿಕೊಳ್ಳುವ ಮೂಲಕ, ನೀವು ನೀತಿಯಲ್ಲಿ ವಿವರಿಸಿರುವ ನಮ್ಮ ಗೋಪ್ಯತೆಯ ಆಚರಣೆಗಳಿಗೆ ಒಪ್ಪಿಗೆಯನ್ನು ನೀಡುತ್ತೀರಿ. ನಿಮ್ಮ ಡೇಟಾವನ್ನು ಪ್ರಕ್ರಿಯೆಗೊಳಿಸಲು ಜವಾಬ್ದಾರರಾಗಿರುವ ಅವಿಯಾಜೆನ್ ಬ್ರಾಯ್ಲರ್ ಬ್ರೀಡರ್‌ಗಳ ಸಂಪರ್ಕ ವಿವರಗಳು aviagen.com/contact-us/ ನಲ್ಲಿ ಲಭ್ಯ ಇವೆ.

**ನಾವು ಸಂಗ್ರಹಿಸುವ ಮಾಹಿತಿ ಮತ್ತು ನಾವು ಅದನ್ನು ಹೇಗೆ ಸಂಗ್ರಹಿಸುತ್ತೇವೆ:**
Aviagen ತನ್ನ ಗ್ರಾಹಕರು ಮತ್ತು ಪೂರೈಕೆದಾರರ ಉದ್ಯೋಗಿಗಳು ಹಾಗೂ ಗುತ್ತಿಗೆದಾರರು, ಹಾಗೂ ನಾವು ವ್ಯವಹಾರವನ್ನು ನಡೆಸುವ ಇತರ ವ್ಯಕ್ತಿಗಳ ವೈಯಕ್ತಿಕ ದತ್ತಾಂಶವನ್ನು ಸಂಗ್ರಹಿಸುತ್ತದೆ. ಸಂಗ್ರಹಿಸಿದ ದತ್ತಾಂಶವು ಮುಖ್ಯವಾಗಿ ಸಂಪರ್ಕ ವಿವರಗಳು (ಉದಾಹರಣೆಗೆ ಹೆಸರು, ವಿಳಾಸ, ದೂರವಾಣಿ ಮತ್ತು ಇಮೇಲ್ ವಿಳಾಸ) ಮತ್ತು ನಮ್ಮ ವ್ಯವಹಾರ ಸಂಬಂಧಗಳಿಗೆ ಸಂಬಂಧಿಸಿದ ಇತರ ಮಾಹಿತಿಯನ್ನೂ ಸಹ ಒಳಗೊಂಡಿರಬಹುದು. ನಾವು ಈ ಮಾಹಿತಿಯನ್ನು ನಮ್ಮ ಮಾರಾಟ, ಮಾರ್ಕೆಟಿಂಗ್ ಮತ್ತು ಖರೀದಿಯ ಚಟುವಟಿಕೆಗಳ ಮೂಲಕ, Aviagen ವೆಬ್‌ಸೈಟುಗಳ ಮೂಲಕ, ಹಾಗೂ ಈವೆಂಟ್‌ಗಳು ಮತ್ತು ಸೌಲಭ್ಯ ಭೇಟಿಗಳಲ್ಲಿ ಸಂಗ್ರಹಿಸುತ್ತೇವೆ.

**ನಾವು ಈ ಮಾಹಿತಿಯನ್ನು ಹೇಗೆ ಬಳಸುತ್ತೇವೆ:**
ನಮ್ಮ ವ್ಯವಹಾರ ಸಂಬಂಧಗಳ ಸಾಮಾನ್ಯ ಸಂಬಂಧಗಳಲ್ಲಿ (ಅಂದರೆ ಮಾರಾಟ, ಮಾರ್ಕೆಟಿಂಗ್ ಮತ್ತು ಖರೀದಿಗೆ ಸಂಬಂಧಿಸಿರುವುದು), ಆಂತರಿಕ ಹಣಕಾಸು ಮತ್ತು ಆಡಳಿತಕ್ಕಾಗಿ ಮತ್ತು ಕಾನೂನು ಅನುಸರಣೆಗಾಗಿ ನಾವು ವೈಯಕ್ತಿಕ ದತ್ತಾಂಶವನ್ನು ಪ್ರಕ್ರಿಯೆಗೊಳಿಸುತ್ತೇವೆ.

ನಮ್ಮ ಉತ್ಪನ್ನಗಳು ಮತ್ತು ಸೇವೆಗಳಲ್ಲಿನ ಪ್ರಮುಖ ಬದಲಾವಣೆಗಳ ಬಗ್ಗೆ ತಿಳಿಸಲು ಮತ್ತು Aviagen ಮತ್ತು ಅದಕ್ಕೆ ಸಂಬಂಧಿಸಿದ ಕಂಪನಿಗಳ ಇತರ ಸೇವೆಗಳು ಮತ್ತು ಉತ್ಪನ್ನಗಳ ಬಗ್ಗೆ ಮಾಹಿತಿಯನ್ನು ನಿಮಗೆ ಒದಗಿಸುವುದಕ್ಕೂ ಸಹ ನಾವು ನಿಮ್ಮ ಸಂಪರ್ಕ ವಿವರಗಳನ್ನು ಬಳಸುತ್ತೇವೆ. ಒಂದು ವೇಳೆ ನೀವು ಈ ಉದ್ದೇಶಕ್ಕಾಗಿ ಸಂಪರ್ಕಿಸಲ್ಪಡುವುದನ್ನು ಇಚ್ಛಿಸದೇ ಇದ್ದಲ್ಲಿ, ದಯವಿಟ್ಟು info@aviagen.comಗೆ ಇಮೇಲ್ ಮಾಡಿ.

ನಾವು ವೈಯಕ್ತಿಕ ದತ್ತಾಂಶವನ್ನು Aviagen ಕಂಪನಿಗಳಲ್ಲಿ, ಈ ನೀತಿಯ ನಿಯಮಗಳಿಗೆ ಒಳಪಟ್ಟು ವರ್ಗಾಯಿಸಬಹುದು. ನಾವು ವೈಯಕ್ತಿಕ ದತ್ತಾಂಶವನ್ನು ಮಾರಾಟ ಮಾಡುವುದಿಲ್ಲ.

**"ಕುಕೀಗಳು":**

Aviagen ನ ವೆಬ್‌ಸೈಟ್‌ಗಳನ್ನು ಹೇಗೆ ಬಳಸಲಾಗುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಮತ್ತು ನಮ್ಮ ಸೈಟ್‌ಗಳಲ್ಲಿ ಸುಧಾರಣೆಗಳನ್ನು ಮಾಡಲು ನಾವು ಕುಕೀಗಳನ್ನು (ನಿಮ್ಮ ವೆಬ್ ಬ್ರೌಸರ್‌ನಲ್ಲಿ ಸಂಗ್ರಹವಾಗಿರುವ ಸಣ್ಣ ಫೈಲ್‌ಗಳು) ಬಳಸುತ್ತೇವೆ. ಕುಕೀಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ, ಹಾಗೆಯೆ ಜೊತೆಯಲ್ಲಿ ಅವುಗಳನ್ನು ಹೇಗೆ ನಿಷ್ಕ್ರಿಯಗೊಳಿಸಬೇಕು ಎನ್ನುವುದರ ಬಗ್ಗೆ ತಿಳಿಯಲು, ದಯವಿಟ್ಟು ಭೇಟಿ ನೀಡಿwww.cookiecentral.com. ಕುಕೀಗಳನ್ನು ನಿಷ್ಕ್ರಿಯಗೊಳಿಸುವುದು ನಿಮ್ಮ Aviagen ವೆಬ್‌ಸೈಟುಗಳ ಬಳಕೆಯನ್ನು ಬಾಧಿಸಬಹುದು.

**ಲಿಂಕ್‌ಗಳು:**

Aviagen ವೆಬ್‌ಸೈಟ್ ಇತರ ವೆಬ್‌ಸೈಟ್‌ಗಳ ಲಿಂಕ್‌ಗಳನ್ನು ಒಳಗೊಂಡಿರಬಹುದು. ನೀವು ಈ ಲಿಂಕ್ ಗಳಲ್ಲಿ ಒಂದರ ಮೇಲೆ ಕ್ಲಿಕ್ ಮಾಡಿದಾಗ, ನೀವು ಮತ್ತೊಂದು ಸೈಟ್ ಅನ್ನು ಪ್ರವೇಶಿಸುತ್ತೀರಿ ಎನ್ನುವುದನ್ನು ದಯವಿಟ್ಟು ಗಮನಿಸಿ. ನಾವು ಇತರ ವೆಬ್‌ಸೈಟ್‌ಗಳ ಒಳಾಂಶದ ಕುರಿತು ಯಾವುದೇ ಹೊಣೆಗಾರಿಕೆಯನ್ನು ಹೊಂದಿರುವುದಿಲ್ಲ ಮತ್ತು ನಾವು ನಿಮಗೆ ಈ ಲಿಂಕ್ ಮಾಡಿರುವ ಸೈಟುಗಳ ಗೋಪ್ಯತೆ ನೀತಿಗಳನ್ನು ಓದುವುದಕ್ಕೆ ಪ್ರೋತ್ಸಾಹಿಸುತ್ತೇವೆ, ಇವು ನಮ್ಮವುಗಳಿಗಿಂತ ವಿಭಿನ್ನವಾಗಿರಬಹುದು.

**ಸುರಕ್ಷತೆ:**

ಅನಧಿಕೃತವಾದ ಬಹಿರಂಗಪಡಿಸುವಿಕೆ, ಬದಲಾವಣೆ ಅಥವಾ ನಾಶಪಡಿಸುವಿಕೆಯಿಂದ ವೈಯಕ್ತಿಕ ದತ್ತಾಂಶವನ್ನು (ಮತ್ತು ಬೇರೆ ಮಾಹಿತಿಯನ್ನು) ರಕ್ಷಿಸಲು ತಂತ್ರಜ್ಞಾನಿಕ ಮತ್ತು ಸಂಘಟನಾತ್ಮಕ ಕ್ರಮಗಳನ್ನು ನಾವು ಬಳಸುತ್ತೇವೆ. ನಮ್ಮ US ಡೇಟಾ ಸೆಂಟರ್ ನಲ್ಲಿರುವ ಸುರಕ್ಷಿತವಾದ ಸರ್ವರ್‌ಗಳಲ್ಲಿ ನಿಮ್ಮ ಕೆಲವು ವೈಯಕ್ತಿಕ ದತ್ತಾಂಶವನ್ನು ಉಳಿಸಿಕೊಳ್ಳಬಹುದು.

**ಯುನೈಟೆಡ್ ಸ್ಟೇಟ್ಸ್ ಗೆ ವರ್ಗಾವಣೆ:**

ನಾವು ಸಂಗ್ರಹಿಸಿದ ವೈಯಕ್ತಿಕ ದತ್ತಾಂಶವನ್ನು ಯುನೈಟೆಡ್ ಸ್ಟೇಟ್ಸ್‌ನಲ್ಲಿರುವ ಕಂಪ್ಯೂಟರ್‌ಗಳಲ್ಲಿ Aviagen ಮೂಲಕ ಶೇಖರಿಸಿ ಪ್ರಕ್ರಿಯೆಗೊಳಿಸಬಹುದು, ಅಲ್ಲಿ ನೀವು ವಾಸಿಸುವ ದೇಶಕ್ಕಿಂತ ಗೌಪ್ಯತೆ ಕಾನೂನುಗಳು ಭಿನ್ನವಾಗಿರಬಹುದು. USಗೆ ಮಾಡುವ ದತ್ತಾಂಶ ವರ್ಗಾವಣೆಗಳು ಯುರೋಪಿಯನ್ ಕಮೀಶನ್ ಅನುಮೋದಿಸಿದ ಪ್ರಮಾಣಿತ ಒಪ್ಪಂದದ ಷರತ್ತುಗಳ ಆಧಾರದ ಮೇಲೆ Aviagen ಕಂಪನಿಗಳ ನಡುವಿನ ಒಪ್ಪಂದಗಳಿಗೆ ಒಳಪಟ್ಟಿರುತ್ತವೆ.

**ದತ್ತಾಂಶ ತೆಗೆದುಹಾಕುವುದು ಮತ್ತು ತಿದ್ದುಪಡಿ ಮಾಡುವುದಕ್ಕೆ, ಪ್ರವೇಶ:**

ನೀವು ನಿಮ್ಮ ದತ್ತಾಂಶವನ್ನು (ಸಂಪರ್ಕ ವಿವರಗಳನ್ನು ಅಪ್‌ಡೇಟ್ ಮಾಡುವುದನ್ನು ಒಳಗೊಂಡು) ಮತ್ತೊಂದು ಕಂಪನಿಗೆ ಕಳುಹಿಸುವುದನ್ನು ಒಳಗೊಂಡಂತೆ ದತ್ತಾಂಶದ ಪ್ರವೇಶ ಅಥವಾ ಸರಿಪಡಿಸುವಿಕೆಗಾಗಿ ವಿನಂತಿಸುವ ಹಕ್ಕನ್ನು ಹೊಂದಿರುತ್ತೀರಿ. ನಿಮ್ಮ ಕೆಲವು ವೈಯಕ್ತಿಕ ಡೇಟಾವನ್ನು ಅನಿರ್ದಿಷ್ಟವಾಗಿ ಉಳಿಸಿಕೊಳ್ಳುವುದು ನಮಗೆ ಅಗತ್ಯವಾಗಬಹುದಾಗಿದ್ದರೂ, ವ್ಯವಹಾರ ಮತ್ತು ಕಾನೂನು ಕಾರಣಗಳಿಗಾಗಿ ನೀವು ಇನ್ನು ಮುಂದೆ ನಮ್ಮೊಂದಿಗೆ ವ್ಯವಹಾರ ಮಾಡದಿದ್ದರೂ, ನಿಮ್ಮ ವೈಯಕ್ತಿಕ ಡೇಟಾವನ್ನು ತೆಗೆದುಹಾಕಲು ನೀವು ವಿನಂತಿಸಬಹುದು. ಇವುಗಳಲ್ಲಿ ಯಾವುದೇ ಕಾರಣಗಳಿಗಾಗಿ ದಯವಿಟ್ಟು info@aviagen.com ನಲ್ಲಿ ಅಥವಾ Aviagen ವೆಬ್‌ಸೈಟ್ ಮೂಲಕ ನಮ್ಮನ್ನು ಸಂಪರ್ಕಿಸಿ.

**ಈ ನೀತಿಗೆ ಬದಲಾವಣೆಗಳು:**

ಕಾಲಕಾಲಕ್ಕೆ ನಮ್ಮ ವ್ಯವಹಾರ ಅಥವಾ ಕಾನೂನಿನಲ್ಲಿ ಬದಲಾವಣೆಗಳನ್ನು ಪ್ರತಿಫಲಿಸಲು ಈ ನೀತಿಯನ್ನು ನಾವು ಪರಿಷ್ಕರಿಸಬಹುದು. ನಾವು ಈ ನೀತಿಯಲ್ಲಿ ಯಾವುದೇ ಗಣನೀಯ ಬದಲಾವಣೆಯನ್ನು ಮಾಡಿದಲ್ಲಿ ಮತ್ತು ನಮ್ಮಲ್ಲಿ ನಿಮ್ಮ ವಿಳಾಸ ಇದ್ದಲ್ಲಿ, ನಾವು ಈ ಕುರಿತು ನಿಮಗೆ ತಿಳಿಸುತ್ತೇವೆ.

**ನಿಮ್ಮ ಹಕ್ಕುಗಳು ಹಾಗೂ ಸಂಪರ್ಕ ಮಾಹಿತಿ:**

ಈ ನೀತಿಗೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳು ಅಥವಾ ದೂರುಗಳನ್ನು ನೀವು ಹೊಂದಿದ್ದರೆ, ದಯವಿಟ್ಟು ನಮ್ಮನ್ನು info@aviagen.com ನಲ್ಲಿ ಅಥವಾ Aviagen ವೆಬ್‌ಸೈಟ್ ಮೂಲಕ ಸಂಪರ್ಕಿಸಿ. EU ಕಾನೂನಿನ ಅಡಿಯಲ್ಲಿ ನಿಮ್ಮ ವೈಯಕ್ತಿಕ ದತ್ತಾಂಶದ ಪ್ರಕ್ರಿಯೆಗೊಳಿಸುವಿಕೆಯ ಕುರಿತಂತೆ ನಿಮ್ಮ ದೇಶದಲ್ಲಿನ ದತ್ತಾಂಶ ರಕ್ಷಣಾ ಪ್ರಾಧಿಕಾರಗಳಿಗೆ ದೂರು ಸಲ್ಲಿಸುವ ಹಕ್ಕನ್ನು ಕೂಡ ಹೊಂದಿರುತ್ತೀರಿ.